ಏಪ್ರಿಲ್ 2010 । ಆಧಾರ ವಾರ್ತಾಸಂಚಯ । ಸೇಂಟ್ ಜಾನ್ಸ್ ರಿಸರ್ಚ್ ಇನ್ಸ್ಟಿಟ್ಯೂಟ್

# ಆಧಾರ ವಾರ್ತೆ

## ರೇಡಿಯೇಷನ್ ಥೆರಪಿ (ವಿಕಿರಣ ಚಿಕಿತ್ಸೆ)



**ತಪ್ಪು ಕಲ್ಪನೆ** ಇದು ಕರೆಂಟ್/ಶಾಕ್ ಚಿಕಿತ್ಸೆ, ಚರ್ಮವನ್ನು ಸುಡುತ್ತದೆ.

ಇದು ಕರೆಂಟ್/ಶಾಕ್ ಚಿಕಿತ್ಸೆ ಅಲ್ಲ, ಚರ್ಮವನ್ನು ಸುಡುವುದಿಲ್ಲ. **ನಿಜ**

### ರೇಡಿಯೇಷನ್ ಥೆರಪಿ ಅಥವ ವಿಕಿರಣ ಚಿಕಿತ್ಸೆ ಎಂದರೇನು?


ರೇಡಿಯೇಷನ್ ಥೆರಪಿ ಎಂದರೆ ಕ್ಯಾನ್ಸರ್ ಜೀವಕೋಶಗಳನ್ನು ನಿಷ್ಕ್ರಿಯಗೊಳಿಸಲು ಎಕ್ಸ್–ರೇ(ಕ್ಷ–ಕಿರಣ) ಅಥವ ಗಾಮ ಕಿರಣಗಳನ್ನು ಬಳಸಿ ಕೊಡುವ ಚಿಕಿತ್ಸೆ. ಕ್ಷ–ಕಿರಣಗಳನ್ನು ಲೀನಿಯರ್ ಆಕ್ಸಿಲರೇಟರ್‌ಗಳಿಂದ ಮತ್ತು ಗಾಮ ಕಿರಣಗಳನ್ನು ಟೆಲಿ ಕೊಬಾಲ್ಟ್ ಮೆಷೀನ್‌ಗಳಿಂದ ತಯಾರು ಮಾಡುತ್ತಾರೆ. ಕ್ಷ–ಕಿರಣಗಳಿಗೂ, ಗಾಮ ಕಿರಣಗಳಿಗೂ ಅಥವ ಇನ್ನಾವುದೇ ರೀತಿಯ ವಿಕಿರಣಗಳಿಗೂ ಇರುವ ವ್ಯತ್ಯಾಸವೆಂದರೆ ಪರಮಾಣುವಿನಿಂದ ಎಲೆಕ್ಟ್ರಾನ್‌ಗಳನ್ನು ಹೊರಹಾಕುವ ಶಕ್ತಿ. ಈ ಪ್ರಕ್ರಿಯೆಗೆ 'ಅಯನೈಜೇಷನ್' (ವಿದ್ಯುದಣುವಾಗುವ ವಿಧಾನ) ಎಂದು ಹೆಸರು.

ಸ್ತನ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸುವ ಮತ್ತೊಂದು ರೀತಿಯ ವಿಕಿರಣ ಎಂದರೆ 'ಎಲೆಕ್ಟ್ರಾನ್ ಬೀಮ್ ಥೆರಪಿ'. ಇದರಲ್ಲಿ ನಿರ್ದಿಷ್ಟ ಆಳದಲ್ಲಿ ಕೆಲಸ ಮಾಡುವ ವಿಕಿರಣಗಳನ್ನು ಬಳಸಿ ಚಿಕಿತ್ಸೆ ನೀಡಲಾಗುತ್ತದೆ.

ರೇಡಿಯೇಷನ್ ಥೆರಪಿಯ ಮುಖ್ಯ ಉದ್ದೇಶವೆಂದರೆ, ಕ್ಯಾನ್ಸರ್ ಜೀವಕೋಶಗಳನ್ನು ನಿಷ್ಕ್ರಿಯಗೊಳಿಸಿ, ರೋಗ ಹರಡದಂತೆ ತಡೆಗಟ್ಟುವುದು. ಇದರಿಂದಾಗಿ ಬಹಳಷ್ಟು ಸಲ ಅಕ್ಕಪಕ್ಕದ ಸಹಜವಾಗಿರುವ ಕೋಶಗಳೂ ಸಹ ಹಾನಿಗೊಳಗಾಗುತ್ತದೆ. ಆದರೆ ಇವು ಬಹಳ ಬೇಗನೆ ಸಾಮಾನ್ಯ ಸ್ಥಿತಿಗೆ ಮರಳುತ್ತವೆ. ಆದ್ದರಿಂದ ರೇಡಿಯೇಷನ್ ಥೆರಪಿಯನ್ನು 5–6 ವಾರಗಳ ಕಾಲ ಕೊಡಲಾಗುತ್ತದೆ.

### ವಿಕಿರಣಗಳು ಹೇಗೆ ಕಾರ್ಯನಿರ್ವಹಿಸುತ್ತವೆ?

ವಿಕಿರಣಗಳು ಪರಮಾಣುವಿನ ಹಂತದಲ್ಲಿ, ಡಿ.ಎನ್.ಎ.(ಡಿ–ಆಕ್ಸಿ ರೈಬೋಸ್ ನ್ಯೂಕ್ಲಿಯಿಕ್ ಆ್ಯಸಿಡ್–ಜೀವಕೋಶಗಳ ಅಡಿಪಾಯ)ಗಳನ್ನು ಹಾನಿಗೊಳಿಸುವ ಮೂಲಕ ಕಾರ್ಯ ನಿರ್ವಹಿಸುತ್ತದೆ. ಮೊದಲಿಗೆ, ಡಿ.ಎನ್.ಎ.ಗಳ ದ್ವಿ ಸುರುಳಿಗಳನ್ನು ತುಂಡರಿಸಿ, ಜೀವಕೋಶಗಳನ್ನು ನಿಷ್ಕ್ರಿಯಗೊಳಿಸುತ್ತದೆ. ಕೆಲವೊಮ್ಮೆ ಡಿ.ಎನ್.ಎಗಳ ಏಕ ಸುರುಳಿ ತುಂಡರಿಸಲ್ಪಟ್ಟಾಗ, ಸುರುಳಿಗಳ ಸಾಮ್ಯತೆಯಲ್ಲಿ ಏರುಪೇರಾಗಿ ಕೋಶಗಳು ನಿಧಾನವಾಗಿ ಸಾಯುತ್ತವೆ.



## ಸ್ತನ ಕ್ಯಾನ್ಸರ್ ಚಿಕಿತ್ಸೆಯಲ್ಲಿ ರೇಡಿಯೇಷನ್ ಥೆರಪಿಯ ಪಾತ್ರ

**ಪೂರಕ ಚಿಕಿತ್ಸೆ** – ಸ್ತನ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಆಪರೇಷನ್ ನಂತರ, ರೋಗ ಮರುಕಳಿಸುವ ಸಾಧ್ಯತೆಯನ್ನು ಕಡಿಮೆಗೊಳಿಸಲು ನೀಡುವ ಕಿಮೋ ಮತ್ತು ರೇಡಿಯೋ/ಹಾರ್ಮೋನ್ ಥೆರಪಿಯನ್ನು ಪೂರಕ ಚಿಕಿತ್ಸೆ ಎನ್ನುತ್ತಾರೆ. ಚಿಕಿತ್ಸೆಯ ಪೂರ್ಣ ಗುರಿ ತಲುಪಲು ಆಪರೇಷನ್ ಜೊತೆ ನೀಡುವ ಪೂರಕ ಚಿಕಿತ್ಸೆಗಳು ಸಹಾಯ ಮಾಡುತ್ತವೆ. ಯಾವ ರೋಗಿಗಳಲ್ಲಿ ಆಪರೇಶನ್ ನಂತರವೂ ರೋಗ ಮರುಕಳಿಸುವ ಸಾಧ್ಯತೆ ಹೆಚ್ಚಾಗಿರುತ್ತದೆಯೊ ಅಂತಹವರಿಗೆ ಪೂರಕ ಚಿಕಿತ್ಸೆ ನೀಡಲಾಗುತ್ತದೆ.

**ಸ್ತನ ರಕ್ಷಣ ಚಿಕಿತ್ಸೆ** – ಇದು ಸ್ತನ ರಕ್ಷಣ ಆಪರೇಷನ್ + ರೇಡಿಯೇಷನ್ ಥೆರಪಿ + ಕೀಮೊಥೆರಪಿ/ ಹಾರ್ಮೋನ್ ಥೆರಪಿಯನ್ನು ಒಳಗೊಂಡಿರುತ್ತದೆ. ಗಡ್ಡೆಯ ಸುತ್ತಮುತ್ತ 2 ಸೆಂ.ಮೀ. ವ್ಯಾಸದಲ್ಲಿ ಕ್ಯಾನ್ಸರ್ ಮರುಕಳಿಸುವ ಸಾಧ್ಯತೆ ಶೇ. 80 ರಷ್ಟು ಹೆಚ್ಚು. ಹಾಗಾಗಿ ಸ್ತನ ರಕ್ಷಣ ಚಿಕಿತ್ಸೆಯಲ್ಲಿ ರೇಡಿಯೇಷನ್ ಬಹು ಮುಖ್ಯ ಪಾತ್ರ ವಹಿಸಿ, ಸ್ಥಳೀಯವಾಗಿ ಹಾಗು ಇನ್ನಿತರ ಜಾಗದಲ್ಲಿ ಮರುಕಳಿಸುವ ಸಾಧ್ಯತೆಯನ್ನು ಕಡಿಮೆಗೊಳಿಸುತ್ತದೆ. ಇಲ್ಲಿ ಚಿಕಿತ್ಸೆಯ ಅವಧಿ ಧೀರ್ಘವಾಗಿದ್ದು ಗಡ್ಡೆ ಇದ್ದ ಜಾಗಕ್ಕೆ ಬೂಸ್ಟ್ ಡೋಸ್ (ಹೆಚ್ಚುವರಿ ಪ್ರಮಾಣ)ಗಳನ್ನು ನೀಡಲಾಗುತ್ತದೆ. ಬೂಸ್ಟ್ ಡೋಸ್ ನೀಡಲು ಎಲೆಕ್ಟ್ರಾನ್ ಬೀಮ್ ಥೆರಪಿ ಅಥವ ಬ್ರಾಕಿಥೆರಪಿ (ಅಂದರೆ ರೇಡಿಯೋ ಆ್ಯಕ್ಟೀವ್ (ವಿಕಿರಣ ಪಟುತ್ವ ಹೊಂದಿರುವ) ವೈರ್ ಅಥವ ಬೀಜ/ಸೂಜಿಯನ್ನು ದೇಹದೊಳಗೆ/ಗಡ್ಡೆಯ ಹತ್ತಿರದ ಅಂಗಾಶದೊಳಗೆ ಸೇರಿಸುವುದು)ಯಿಂದ ಕೊಡಬಹುದು.

ಗಡ್ಡೆ ಇರುವ ಸ್ತನವನ್ನು ಪೂರ್ತಿ ತೆಗೆದು ಹಾಕುವುದರಿಂದ ಮುಂದೆ ರೋಗ ಮರುಕಳಿಸಲಾರದು ಎಂಬ ನಂಬಿಕೆಯಿಂದ ಬಹಳಷ್ಟು ಜನ ಮ್ಯಾಸ್ಟೆಕ್ಟಮಿಗೆ (ಸ್ತನ ನಿರ್ಮೂಲನಾ ಆಪರೇಷನ್) ಒಳಗಾಗುತ್ತಿದ್ದರು. ಆದರೆ, ಸ್ಥಳೀಯವಾಗಿ ಮರುಕಳಿಸುವ ಮತ್ತು ಬದುಕುಳಿಯುವ ಸಾಧ್ಯತೆಯು ಸ್ತನ ರಕ್ಷಣ ಚಿಕಿತ್ಸೆ ಮತ್ತು ಮ್ಯಾಸ್ಟೆಕ್ಟಮಿಯಲ್ಲಿ ಸಮಾನವಾಗಿದೆ. (ಸರ್ಜಿಕಲ್ ಕ್ಲಿನಿಕ್ಸ್ ಆಫ್ ನಾರ್ಥ್ ಅಮೇರಿಕಾ, 2003) ಮ್ಯಾಸ್ಟೆಕ್ಟಮಿಯಿಂದ ಉಂಟಾಗುವ ದೈಹಿಕ ಬದಲಾವಣೆ ರೋಗಿಯ ಮೇಲೆ ತೀವ್ರ ಮಾನಸಿಕ ಪರಿಣಾಮ ಬೀರುವುದರಿಂದ ಚಿಕಿತ್ಸಕರು ಸ್ತನ ರಕ್ಷಣ ಚಿಕಿತ್ಸೆ / ಸ್ತನ ನಿರ್ಮೂಲನಾ ಆಪರೇಷನ್ ಆಯ್ಕೆಯನ್ನು ಪ್ರತಿ ರೋಗಿಗೂ ನೀಡಬೇಕು.

## ಮುಂಬರುವ ಚಟುವಟಿಕೆಗಳು



**ವೃತ್ತಿಕ ಸಂವಾದ** – 'ಪೌಷ್ಟಿಕಾಂಶ ಮತ್ತು ಆಹಾರ ಕ್ರಮ ಕುರಿತು ಸಂವಾದ – ಡಾ. ರೆಬೆಕ್ಕಾ ರಾಜ್ ರಿಂದ, ಮಧ್ಯಾನ್ಹ 3.00 ಘಂಟೆಗೆ, ಏಪ್ರಿಲ್ 24, 2010.

**'ಸನ್ ಫೀಸ್ಟ್ ಮ್ಯಾರಥಾನ್** – ಮೇ 25, 2010 ಸ್ತನ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸಲು 'ಆಧಾರ' ಭಾಗವಹಿಸುತ್ತಿದೆ.

**ಉಪಶಾಮಕ ರೇಡಿಯೇಷನ್ ಥೆರಪಿ** – ಸಾಮಾನ್ಯವಾಗಿ ಕಡೆಯ ಹಂತದ ಸ್ತನ ಕ್ಯಾನ್ಸರ್ ಮೂಳೆಗಳಿಗೆ ಮತ್ತು ಮೆದುಳಿಗೆ ಹರಡುತ್ತದೆ. ಆ ಸಂದರ್ಭದಲ್ಲಿ ರೋಗ ಉಲ್ಬಣಿಸುವುದನ್ನು ತಡೆಯಲು ಮತ್ತು ನೋವನ್ನು ಕಡಿಮೆ ಮಾಡಲು ರೇಡಿಯೇಷನ್ ಚಿಕಿತ್ಸೆ ನೀಡಲಾಗುತ್ತದೆ.

## ತೊಂದರೆಗಳು /ಅಡ್ಡಪರಿಣಾಮಗಳು

ಯಾವುದೇ ಚಿಕಿತ್ಸೆಯಲ್ಲಿ ಅದರದೇ ಆದ ತೊಂದರೆಗಳು/ಅಡ್ಡಪರಿಣಾಮಗಳಿರುತ್ತವೆ. ರೇಡಿಯೇಷನ್ ಥೆರಪಿಯಲ್ಲಿ ಸಾಧಾರಣವಾಗಿ ಕಂಡುಬರುವ ತೊಂದರೆಯೆಂದರೆ ಚರ್ಮದ ಬಣ್ಣದಲ್ಲಿ ಬದಲಾವಣೆ. ಸಾಮಾನ್ಯವಾಗಿ ಪ್ರತಿದಿನವೂ ಹೊರಚರ್ಮ ಉದುರುತ್ತದೆ. ಈ ಕ್ರಿಯೆ ರೇಡಿಯೇಷನ್ ಥೆರಪಿ ಪಡೆಯುವಾಗ ತ್ವರಿತಗೊಳ್ಳುತ್ತದೆ. ಆದ ಕಾರಣ ಚಿಕಿತ್ಸೆ ಪಡೆಯುವ ಜಾಗಕ್ಕೆ ಎಣ್ಣೆ/ಕ್ರೀಮ್ ಅನ್ನು ಹಚ್ಚಬಾರದೆಂದು ಸೂಚಿಸಲಾಗುತ್ತದೆ. ಕೆಲವೊಮ್ಮೆ ರೋಗಿಗಳಿಗೆ ಆಹಾರವನ್ನು ನುಂಗಲು ಸಾಧ್ಯವಾಗದಿರಬಹುದು, ಸೂಕ್ತ ಔಷಧಗಳಿಂದ ಇದನ್ನು ತಡೆಯಬಹುದು. ಬಹಳ ಹಿಂದೆ ಶ್ವಾಸಕೋಶದ ತೊಂದರೆಗಳು ಕಾಣಿಸಿಕೊಳ್ಳುತ್ತಿದ್ದವು, ಆದರೆ ಇತ್ತೀಚಿನ ವರ್ಷಗಳಲ್ಲಿ ಚಿಕಿತ್ಸೆಯ ವಿಧಾನ ಮುಂದುವರೆದಂತೆಲ್ಲಾ ಈ ತೊಂದರೆ ಕುಗ್ಗಿದೆ. ಸಾಧಾರಣವಾಗಿ ಆಪರೇಷನ್ ನಂತರ ತೋಳು ಅಥವ ಕಂಕುಳಿನ ಊತ ಕಂಡುಬರುತ್ತದೆ ಮತ್ತು ಇದು ಸೂಕ್ತ ವ್ಯಾಯಾಮ/ಫಿಸಿಯೋಥೆರಪಿ ಮಾಡದೆ, ರೇಡಿಯೇಷನ್ ಥೆರಪಿ ಪಡೆದರೆ ಹೆಚ್ಚಾಗಲೂ ಬಹುದು.

ಆದ್ದರಿಂದ ರೇಡಿಯೇಷನ್ ಥೆರಪಿಯು ಸ್ತನ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಆಪರೇಷನ್ ಮತ್ತು ಕಿಮೋ ಥೆರಪಿಯ ಜೊತೆ ಪ್ರಮುಖ ಪಾತ್ರ ವಹಿಸಿ, ಚಿಕಿತ್ಸೆಯ ಗುರಿ ತಲುಪಲು ಆವಶ್ಯವಾಗಿದೆ. ಮತ್ತು ಸ್ತನ ಕ್ಯಾನ್ಸರಿನ ಸೂಕ್ತ ನಿರ್ವಹಣೆಯಲ್ಲಿ ಈ ತರಹದ ಸಂಯೋಜಿತ ಕಾರ್ಯನಿರ್ವಹಣಾ ಪದ್ದತಿಗಳು

**ಡಾ. ವಿಜಯ ಭಾಸ್ಕರ್ (ಕನ್‌ಸಲ್ಟೆಂಟ್ ರೇಡಿಯೇಷನ್ ಆಂಕಾಲಜಿಸ್ಟ್)**
**ಕ್ಯೂರಿ ಸೆಂಟರ್ ಆಫ್ ಆಂಕಾಲಜಿ**

## 'ಪ್ರೇಮದಿಂದ ಭಯವನ್ನು ಹೊರದೂಡೋಣ'

ನನ್ನ ಬಲ ಸ್ತನದಲ್ಲಿ ಕ್ಯಾನ್ಸರ್ ಗಡ್ಡೆ ಇದೆ ಎಂದು ತಿಳಿದ ದಿನ ನನ್ನ ಮೊದಲ ಪ್ರತಿಕ್ರಿಯೆ ಭಯ..., ಮುಂದಾಗಬಹುದಾದ ಪರಿಣಾಮಗಳ ಬಗೆಗಿನ ಭಯ..., ಬಹುಶಃ ಬೇಗನೆ ಬಂದೆರಗಬಹುದಾದ ಸಾವಿನ ಕುರಿತು ಭಯ. ಅಕ್ಟೋಬರ್ 2006ರಲ್ಲಿ ನನಗೆ ಕ್ಯಾನ್ಸರ್ ಇದೆ ಎಂದು ಪತ್ತೆಯಾದಾಗ, ಅದು ಯಾವ ಹಂತದಲ್ಲಿ ಇದೆ ಎಂದು ಗೊತ್ತಿರಲಿಲ್ಲ ಮತ್ತು ನನಗೆ ಇದು ಮುಂದೆ ಬರಬಹುದಾದ ಎಲ್ಲ ಪರಿಣಾಮಗಳ ಮುನ್ಸೂಚನೆ ಎಂದೆನಿಸಿತು. ಮನಸ್ಸು ಹಗುರವಾಗಲು ಬೇರೆಯವರಿಗೆ ಕಾಣದಂತೆ ಕ್ಷಣಕಾಲ ಅತ್ತೆ, ಆಗ ನನ್ನಂತಹುದನ್ನೆ ಎಷ್ಟೋ ಜನ ನನಗಿಂತಲೂ ಕಠಿಣವಾಗಿ ಅನೇಕ ಸಂದರ್ಭಗಳಲ್ಲಿ ಎದುರಿಸುತ್ತಿದ್ದಾರೆ ಎನ್ನುವ ಸತ್ಯ ತುಸು ಧೈರ್ಯ ನೀಡಿತು. ನನಗೆ ನಾನೇ 'ಈ ಸುಂದರ ಜಗತ್ತು ಮತ್ತು ನಮ್ಮ ಪ್ರೀತಿಪಾತ್ರರೆಲ್ಲರನ್ನು ಅಗಲಲೇಬೇಕಾದ ಆ ಭಯಾನಕ ಕ್ಷಣದ ಮುನ್ಸೂಚನೆ ದೊರೆತಿರುವ ವಿಶೇಷ ವ್ಯಕ್ತಿಗಳಲ್ಲಿ ನಾನೂ ಒಬ್ಬಳು' ಎಂದುಕೊಂಡೆ. ಅಲ್ಲಿಂದ ಜೀವನದ ಬಗೆಗಿನ ನನ್ನ ದೃಷ್ಟಿಕೋನ ಬದಲಾಯಿತು.

ನಿಮಗೆಲ್ಲರಿಗೂ ಆಶ್ಚರ್ಯ ಎನಿಸಿರಬಹುದು ಇದರಲೆಲ್ಲಾ ಪ್ರೇಮವೆಲ್ಲಿದೆ ಎಂದು. ನನ್ನ ತಿಳುವಳಿಕೆ ಮತ್ತು ಅನುಭವದಲ್ಲಿ 'ದೇವನೆಂದರೆ' ತಂದೆತಾಯಿಯರಂತೆ ನಿಷ್ಕಲ್ಮಶ ಪ್ರೀತಿ ಹರಿಸಿ, ಕಾಳಜಿವಹಿಸುವವನು. ಆ ದೇವನೆ ನನ್ನನ್ನು ಈ ಜಗತ್ತಿಗೆ ಕಳುಹಿಸಿದವನು ಮತ್ತು ನನಗೆ ಒಳಿತಾಗಲೆಂದು ಬಯಸುವವನು ಎಂದು ನಂಬಿದ್ದೇನೆ. ನನಗೇನಾದರೂ ತೊಂದರೆ ಆದಲ್ಲಿ ಆ ದೇವನಿಗೆ ತಿಳಿಯುತ್ತದೆ ಮತ್ತು ದೇವನನ್ನು ನಂಬಿದವರೆಲ್ಲರಿಗೂ ಒಳಿತಾಗುತ್ತದೆಂದು ಕೊಂಡಿದ್ದೇನೆ. ಆ ದೇವನ ಆಶೀರ್ವಾದದಿಂದ ನನ್ನ ಜೀವನದ ಐವತ್ತು ವರ್ಷಗಳನ್ನು ಆರೋಗ್ಯವಂತಳಾಗಿ ಬಾಳಿದ್ದೇನೆ ಮತ್ತು

ಅದಕ್ಕಾಗಿ ನನ್ನನ್ನು ಪ್ರೀತಿಸುವ ಮತ್ತು ತನ್ನೆಲ್ಲಾ ಸೃಷ್ಟಿಯನ್ನು ಅಕ್ಕರೆಯ ಮಗುವಿನಂತೆ ಕಾಣುವ ಆ ದೇವನಿಗೆ ಚಿರಋಣಿಯಾಗಿದ್ದೇನೆ. ಈ ಸಂದರ್ಭದಲ್ಲಿ ಓರ್ವ ನವ್ಯ ಬರಹಗಾರ ಹೇಳಿದ ಮಾತು ನೆನಪಾಗುತ್ತಿದೆ, "ನಿನ್ನ ದೃಷ್ಟಿಯಲ್ಲಿ ಇದು ಮರ, ಆದರೆ ದೇವನಿಗೆ ಇದು ತನ್ನ ಅಕ್ಕರೆಯ ಕೂಸು". ಆದ್ದರಿಂದ ಆ ದೇವನಲ್ಲಿ ಭರವಸೆ ಇಟ್ಟಾಗ ಯಾವ ಕಾರಣಕ್ಕೂ ಭಯಪಡಬೇಕಾಗಿಲ್ಲ.

ಅಕ್ಟೋಬರ್ 4, 2006ರಂದು ಎರಡನೆಯ ಸ್ಟೇಜ್‌ನಲ್ಲಿರುವ ಕ್ಯಾನ್ಸರ್ ಇದೆ ಎಂದು ತಿಳಿದಾಗ ನನಗರಿವಿಲ್ಲದಂತೆ ಭಯ ಆವರಿಸಿತು. ಹೃದಯ ಚೂರಾದಂತೆ ಅನಿಸಿ ಕಣ್ಣುಗಳು ಕಣ್ಣೀರ ಕೊಳಗಳಾಯಿತು. ಇತರರು ಅದನ್ನು ಗಮನಿಸದಿದ್ದರೂ ಆ ದೇವನಿಗೆ ಕಾಣಿಸಿತು. ಕೆಲವೇ ಕ್ಷಣಗಳಲ್ಲಿ ನನ್ನೊಳಗಿನ ಚೈತನ್ಯ ಆ ಭಯಾನಕ ಸಂದರ್ಭವನ್ನು ಎದುರಿಸಲು ಸಹಾಯ ಮಾಡಿತು. ಕೆಲವೇ ತಿಂಗಳುಗಳಿರಲಿ ಅಥವ ವರ್ಷಗಳಿರಲಿ ಸತ್ಯವನ್ನು ಒಪ್ಪಿಕೊಂಡು, ಸಂದರ್ಭವನ್ನು ಎದುರಿಸಲು ಸನ್ನದ್ಧವಾಗುವಂತೆ ಪ್ರೇರೇಪಿಸಿತು. ಆಗ ನನ್ನ ವೈದ್ಯರು "ಕ್ಯಾನ್ಸರ್ 2ನೆಯ ಸ್ಟೇಜ್‌ನಲ್ಲಿದೆ, ನಾವು ಅದನ್ನು ನಿಯಂತ್ರಿಸಬಲ್ಲೆವು" ಎಂದಾಗ, ಪೇಲವ ನಗೆಯೊಂದಿಗೆ ಪ್ರತಿಕ್ರಿಯಿಸಿದೆ ಎಂದು ನೆನಪು.

ಆಪರೇಷನ್, ಕೀಮೋ, ಮತ್ತು ರೇಡಿಯೋ ಥೆರಪಿ ಪೂರ್ವನಿರ್ಧಾರದಂತೆ ಯಾವ ತೊಂದರೆಗಳಿಲ್ಲದಂತೆ ನಡೆಯಿತು. ನಾನು ಈ ಎಲ್ಲ ಹಂತದಲ್ಲಿ 'ಎಲ್ಲಾ ಒಳಿತಾಗುತ್ತದೆ' ಎನ್ನುವ ಆಶಾಭಾವನೆಯಿಂದಿದ್ದೆ. ಆ ದೇವನೂ ಸಹ ಎಲ್ಲಾ ರೀತಿಯಿಂದಲೂ ಗುಣಪಡಿಸುತ್ತಿದ್ದಾನೆ ಎಂಬ ಆಧ್ಯಾತ್ಮಿಕ, ಭಾವನಾತ್ಮಕ ಯೋಚನೆ ಕೂಡ ಒಂದು ವಿಶೇಷ ಅನುಭವ ನೀಡಿತು. ಇದು ಎಲ್ಲರನ್ನೂ ಮತ್ತು ಎಲ್ಲವನ್ನೂ ವಿಭಿನ್ನ ದೃಷ್ಟಿಕೋನದಿಂದ ನೋಡಲು ಸಹಾಯ ಮಾಡಿತು. ನನ್ನ ಅಸಹಾಯಕ ಸ್ಥಿತಿಯನ್ನು ನನ್ನೊಡನೆ ಇದ್ದ 'ಸೋದರಿ'ಯರು ಸುಲಲಿತಗೊಳಿಸಿದರು. ಮಧ್ಯರಾತ್ರಿಯಲ್ಲೂ ನನಗೆ ದೊರೆತ ಸಹಾಯ ಕಂಡು ನನ್ನ ಮನತುಂಬಿ ಬಂತು. ಕೆಲವು ಕಾಲ ರೋಗಿಯಾಗಿದ್ದುದು ನನ್ನನ್ನು ನಾನು ಪರಾವಲಂಬಿಯಾಗಿ ಕಾಣಲು, ಪಡೆದ ಪ್ರತಿಯೊಂದು ಸಣ್ಣಪುಟ್ಟ ಸಹಾಯಕ್ಕೂ ಕೃತಜ್ಞತೆ ಸಲ್ಲಿಸುವ ಭಾವನೆ ಕಲಿಸಿತು. ರೋಗಿಗಳ ಬಗ್ಗೆ ಮರುಕ ಪಡುವ ಮತ್ತು ಸುತ್ತಲಿನ ಪರಿಸರದಲ್ಲಿರುವ ಅಸಂಖ್ಯಾತ ಜೀವಿಗಳ ಕುರಿತು ಕಾಳಜಿ ವಹಿಸುವಂತೆ ಅನಿಸಿತು. ಈ ರೀತಿಯ ವೈಯಕ್ತಿಕ ಪರಿವರ್ತನೆಗಳಲ್ಲದೆ ಮತ್ತು ಸಕಾಲದಲ್ಲಿ ದೊರಕಿದ ಸಹಾಯಗಳಲ್ಲದೆ, ಆ ದಿನ/ವಾರಗಳಲ್ಲಿ(ನನ್ನ ವಿಷಯದಲ್ಲಂತೂ ತಿಂಗಳುಗಟ್ಟಲೆ ಕಾರಣ ಸ್ರಾವ ಸಂಗ್ರಹಣೆ – ಇದನ್ನು ಆಗಾಗ ಹೊರ ತೆಗೆಯಬೇಕಾಯಿತು ಮತ್ತು ಮಾರ್ಚ್ ತನಕವೂ ಮುಂದುವರೆಯಿತು) ಧೈರ್ಯ ತುಂಬಿದ, ಪ್ರೋತ್ಸಾಹ ನೀಡಿದ ಸಂಗತಿಗಳೆಂದರೆ ನನ್ನ ಪ್ರೀತಿಪಾತ್ರರ ಭೇಟಿ, ಖುದ್ದು ಬರಲಾರದವರು ಬರೆದ ಪತ್ರಗಳು, ಶುಭಾಶಯ ಕೋರಿದ ಕಾರ್ಡ್‌ಗಳು. ಇವೆಲ್ಲವೂ ಉಲ್ಲಾಸ, ಭರವಸೆ, ಪ್ರೋತ್ಸಾಹ ಮತ್ತು ಆಶೀರ್ವಾದಗಳನ್ನು ನೀಡಿತು. ನವೆಂಬರ್ 17, 2009 ರಂದು ಮೊದಲ ಆಪರೇಷನ್ ಆದ ಮೂರು ವರ್ಷದ ನಂತರ ಮತ್ತೊಮ್ಮೆ ಅಂತಹುದೇ ಆಪರೇಷನ್‌ಗೆ ಒಳಗಾಗಬೇಕಾಯಿತು. ಈ ಬಾರಿ ಪ್ರತಿಯೊಂದು ಸಂಗತಿಯನ್ನು ಮತ್ತು ಸ್ವತಃ ನನ್ನನ್ನು ಆ ದೇವನಿಗೆ ಒಪ್ಪಿಸಿಕೊಂಡು, ಅಣಿಯಾದೆ. ಪರಿಣಾಮ, ಅದ್ಭುತವಾದ ಪ್ರಸನ್ನತೆ, ಶಾಂತಿ, ಉಪಶಮನ ಮತ್ತು ಉಲ್ಲಾಸ ದೊರೆಯಿತು. ಈಗ ನಾನು ಸಾಮಾನ್ಯ ಜೀವನ ನಡೆಸಲು ಶಕ್ತಳಿದ್ದೇನೆ. ಒಂದಲ್ಲಾ ಒಂದು ಕಾರಣದಿಂದ ರೋಗಿಯಾಗುವ ವಿಶೇಷ 'ಭಾಗ್ಯ' ಪಡೆದವರೆಲ್ಲರಿಗೂ ನನ್ನ ಹಾರೈಕೆ ಮತ್ತು ಪ್ರಾರ್ಥನೆಯೆಂದರೆ, ನಾವು ಅಂದರೆ ರೋಗಿಗಳು ನಮ್ಮನ್ನು ಪ್ರೀತಿಸುವ, ಕಾಳಜಿವಹಿಸುವ ದೇವನಿಗೆ ಸಮರ್ಪಿಸಿಕೊಳ್ಳುವುದರಿಂದ ಬೆಲೆಕಟ್ಟಲಾಗದ ಪಾಠ ಕಲಿಯುತ್ತೇವೆ. ಈ ಅನುಭವ ನಮ್ಮ ಜೀವನದ ಪ್ರತಿಯೊಂದು ದಿನವನ್ನು ಸಂತೋಷದಿಂದ ಕಳೆಯುವಂತೆ, ನಮ್ಮ ಮನಸ್ಸಿನ ಭಯವನ್ನು ಹೊರಗಟ್ಟುತ್ತದೆ.

**ಸಿಸ್ಟರ್ ಮೇರಿ ಲಿಲಿ ಬರ್ನಾಡ್**

## ಆಧಾರದ ಚಟುವಟಿಕೆಗಳು.

ಈ ಬಾರಿಯ 'ವೃಶ್ಚಿಕ ಸಂವಾದ' ವನ್ನು 10 ಅಕ್ಟೋಬರ್. 2009ರಂದು ಆಯೋಜಿಸಲಾಗಿತ್ತು. 68 ವರ್ಷದ ಶ್ರೀಮತಿ ಲಕ್ಷ್ಮಿಯವರು (1997ರಲ್ಲಿ ಕ್ಯಾನ್ಸರ್ ಪತ್ತೆಯಾಗಿ, ರೋಗವನ್ನು ಮೆಟ್ಟಿನಿಂತಿರುವವರು) ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಅವರು ರ್‍ಯಾಡಿಕಲ್ ಮ್ಯಾಸ್ಟೆಕ್ಟಮಿಗೆ ಒಳಗಾಗಿ, 4 ಸೈಕಲ್ ಕೀಮೋ ಥೆರಪಿಯನ್ನು ಪಡೆದು, ಹನ್ನೆರಡು ವರ್ಷ ಕಳೆದಿದೆ ಮತ್ತು ಈ ಸಂದರ್ಭದಲ್ಲಿ ಮರುಕಳಿಸುವ ಯಾವ ಚಿಹ್ನೆಗಳು ಕಾಣಲಿಲ್ಲ ಎಂದು ತಿಳಿಸಲು ಹರ್ಷಿಸಿದರು. "ಕ್ಯಾನ್ಸರ್ ಇದೆ ಎನ್ನುವ ವಿಷಯ ನನ್ನನ್ನು ಬದಲಿಸಲಿಲ್ಲ ಆದರೆ ಪ್ರತಿ ದಿನವನ್ನು ಗೌರವಿಸುವಂತೆ ಮಾಡಿತು" ಎಂಬ ಮಾತುಗಳಿಂದ ತಮ್ಮ ಅನುಭವಗಳನ್ನು ಹಂಚಿಕೊಂಡರು. ಅವರ ಸಕಾರಾತ್ಮಕ ಭಾವನೆ ಅವರನ್ನು ಉತ್ಸಾಹಿಯಾಗಿ, ಚಟುವಟಿಕೆಯಿಂದ ಕೂಡಿರುವಂತೆ, ಆರೋಗ್ಯವಾಗಿರಲು ಪ್ರೇರಣೆ ನೀಡಿದೆ.



4ನೇ ಕ್ರಾಬ್ ಟಾಕ್

# ಶ್ರದ್ಧಾಂಜಲಿ



ಶ್ರೀ ಸುಭಾಷ್ ಬಗಾರಿಯಾ

'ಆಧಾರ'ದ ಸದಸ್ಯರೆಲ್ಲರಿಗೆ ನಾನು ಅತ್ಯಂತ ದು:ಖದಿಂದ ಶ್ರೀ ಸುಭಾಷ್ ಬಗಾರಿಯಾರ ಆಕಸ್ಮಿಕ ಮತ್ತು ಅಕಾಲಿಕ ನಿಧನದ ಸುದ್ದಿಯನ್ನು ತಿಳಿಸಲು ವಿಷಾಧಿಸುತ್ತೇನೆ.

ಇತ್ತೀಚಿನ ದಿನಗಳಲ್ಲಿ ಪ್ರತಿಯೊಂದು ಸಣ್ಣ ಕೆಲಸಗಳ ಬಗ್ಗೆ ಅಪರಿಮಿತವಾಗಿ ಸ್ವಯಂ ಪ್ರಚಾರ ಮಾಡಿಕೊಳ್ಳುವವರಿರುವಾಗ, ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದ್ದರೂ ಪ್ರಚಾರ ಬಯಸದೆ ಎಲೆಮರೆ ಕಾಯಿಯಂತೆ ಇರಲು ಬಯಸುವ ಅತಿ ವಿರಳ ಗುಂಪಿಗೆ ಸುಭಾಷ್ ಸೇರುತ್ತಾರೆ.

ಎಸ್.ಜೆ.ಆರ್.ಐ.ನ್‌ಲ್ಲಿ 'ಆಧಾರ'ವನ್ನು ರಚಿಸುವ ಮೂಲಕ ಸ್ತನ ಕ್ಯಾನ್ಸರ್ ಸಂಶೋಧನೆ ಮತ್ತು ಸಹಾಯಕ ತಂಡವನ್ನು ಆರಂಭಿಸುವ ಅವಕಾಶವನ್ನು 'ಬಗಾರಿಯಾ ಶಿಕ್ಷಣ ಸಂಸ್ಥೆ'ಯ ಉದಾರ ಮತ್ತು ಅನಿರ್ಬಂಧಿತ ಸಹಾಯಧನ ಕಲ್ಪಿಸಿತು. ಶ್ರೀ ಸುಭಾಷ್ ಬಗಾರಿಯಾ ಈ ಸಂಸ್ಥೆಯನ್ನು ಮುನ್ನಡೆಸುತ್ತಿದ್ದರು. 'ಆಧಾರ'ದ ಸಭೆಗಳಲ್ಲಿ ಮತ್ತು ವಾರ್ತಾಸಂಚಯಗಳಲ್ಲಿ ಈ ಸಂಗತಿಯನ್ನು ಬಹಿರಂಗಗೊಳಿಸದ ಉದ್ದೇಶವೇನೆಂದರೆ, ಶ್ರೀ ಸುಭಾಷ್‌ರಿಗೆ ಈ ರೀತಿಯ ಚಟುವಟಿಕೆಗಳ ಬೆನ್ನೆಲುಬು ಎಂದು ಗುರುತಿಸಿಕೊಳ್ಳುವದಕ್ಕಿಂತಲೂ, ಆರಂಭಿಸಿದ ಕೆಲಸ ಕಾರ್ಯಗಳು ಹೆಚ್ಚು ಮುಖ್ಯವಾಗಿದ್ದವು. ಈ ಸಂಸ್ಥೆ ಇಂತಹ ಇನ್ನೂ ಅನೇಕ ಕೆಲಸಕಾರ್ಯಗಳಿಗೆ ಉತ್ತೇಜನ ನೀಡುತ್ತಿದೆ.

ಶ್ರೀ ಸುಭಾಷ್‌ರ ನಿಧನದಿಂದ ಒಬ್ಬ ಪ್ರೀತಿಪಾತ್ರ ಗೆಳೆಯ ಮತ್ತು ಶ್ರೇಷ್ಟ ವ್ಯಕ್ತಿಯನ್ನು ಕಳೆದುಕೊಂಡಿದ್ದೇನೆ.

ಈ ದಾರುಣ ನೋವನ್ನು ಸಹಿಸುವ ಶಕ್ತಿ ಅವರ ಕುಟುಂಬಕ್ಕೆ ದೊರೆಯಲಿ ಎಂದು ನಾವೆಲ್ಲರೂ ಪ್ರಾರ್ಥಿಸೋಣ.

**ಟಿ.ಎಸ್.ಶ್ರೀಧರ್**
**ಸೇಂಟ್ ಜಾನ್ಸ್ ರಿಸರ್ಚ್ ಇನ್ಸಿಟ್ಯೂಟ್**

ವಿಶ್ವಮಟ್ಟದ ಅಥ್ಲೀಟ್‌ಗಳು ಮ್ಯಾರಥಾನ್ ಅಥವ ಆ ರೀತಿಯ ರೇಸ್‌ಗಳಲ್ಲಿ ಭಾಗವಹಿಸಿ ಮತ್ತು ಆ ಸಂದರ್ಭವನ್ನು ಸಮಾಜ ಸೇವೆಗಳಿಗೆ ನಿಧಿ ಸಂಗ್ರಹಿಸಲು ಬಳಸಿಕೊಳ್ಳುತ್ತಾರೆ. ಈ ಬಾರಿ 'ದಿ ಬ್ಯಾಂಗಲೋರ್ ಅಲ್ಟ್ರಾ ಮ್ಯಾರಥಾನ್'ನ ಅಂತಹ ಚಟುವಟಿಕೆಯಲ್ಲಿ 'ಆಧಾರ' ಪಾಲೊಂಡಿತ್ತು. ಈ ಕಾರ್ಯಕ್ರಮವನ್ನು 'ದಿ ಫುಲ್ಲರ್ ಲೈಫ್' ಎಂಬ ಮನರಂಜನಾ ಕೇಂದ್ರ ಪ್ರಾರಂಭಿಸಿದ, 'ರನ್ನರ್ಸ್ ಫಾರ್ ಲೈಫ್'(ಆರ್.ಎಫ್.ಎಲ್) ಎನ್ನುವ ಸಂಸ್ಥೆ ಆಯೋಜಿಸಿತ್ತು. ಆರ್.ಎಫ್.ಎಲ್ ಮ್ಯಾರಥಾನ್ ಓಟದಲ್ಲಿ ಆಸಕ್ತಿಯಿರುವ ಸಮಾನ ಮನಸ್ಕರ ತಂಡವಾಗಿದೆ. ಆರ್.ಎಫ್.ಎಲ್ ಅಲ್ಟ್ರಾ ಮ್ಯಾರಥಾನ್ ಅನ್ನು ಮೊದಲ ಬಾರಿಗೆ ನವೆಂಬರ್ 15, 2009ರಂದು ಹೆಸರಘಟ್ಟದಲ್ಲಿ ನಡೆಸಲಾಯಿತು. 'ಆಧಾರ'ಕ್ಕಾಗಿ ಹಣ ಒಗ್ಗೂಡಿಸಲು ಮತ್ತು ಸ್ತನ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಇಬ್ಬರು ಸ್ವಯಂ ಸೇವಕರು ಈ ಮ್ಯಾರಥಾನ್ ನಲ್ಲಿ ಪಾಲೊಂಡರು. 50 ಕಿ.ಮೀ ಓಟದಲ್ಲಿ ಶ್ರೀ.ವೆಂಕಟ ರಾಚೂರ್ ಮತ್ತು 25 ಕಿ.ಮೀನಲ್ಲಿ ಶ್ರೀ.ಮಂಜು ಮೈಸೂರ್ ರವರು ಪಾಲ್ಗೊಂಡರು. 'ಆಧಾರ' ಅವರೆಲ್ಲರ ಪ್ರಯತ್ನ ಮತ್ತು ನೇತೃತ್ವ ಹಾಗೂ ನಮ್ಮ ಉದ್ದೇಶವನ್ನು ಬೆಂಬಲಿಸಲು ಉದಾರವಾಗಿ ಧನ ಸಹಾಯ ನೀಡಿದವರೆಲ್ಲರಿಗೂ ಋಣಿಯಾಗಿದೆ.



ಬೆಂಗಳೂರ್ ಅಲ್ಟ್ರಾ ಮ್ಯಾರಥಾನ್‌ನಲ್ಲಿ ಶ್ರೀ ವೆಂಕಟ್ ರಾಚೂರ್

'ಆಧಾರ'ವು ಸ್ತನ ಕ್ಯಾನ್ಸರ್ ಮೆಟ್ಟಿನಿಂತಿರುವವರ ಮುಂದಾಳತ್ವದಲ್ಲಿ ಒಂದು 'ಮುಖ್ಯ ಸಮಿತಿ'(ಕೋರ್ ಗ್ರೂಪ್) ಅನ್ನು ಕೂಡ ರಚಿಸಿದೆ. ಇತರ ರೋಗಿಗಳಿಗೆ ತಮ್ಮ ರೋಗ ನಿರ್ವಹಣೆಯಲ್ಲಿ ಸಹಾಯ ಮಾಡಲು ಶಕ್ತವಾಗುವಂತೆ ರೂಪಿಸಲಾಗಿದೆ. 30 ಜನವರಿಯಂದು ಈ ಸಮಿತಿಯ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಮಿತಿಯಲ್ಲಿ, 6 ಜನ ಸ್ತನ ಕ್ಯಾನ್ಸರ್ ಅನ್ನು ಮೆಟ್ಟಿ ನಿಂತಿರುವವರಿದ್ದಾರೆ: ಶ್ರೀಮತಿ ಅನಿತಾ ವಿಜಯರಾಜನ್, ಶ್ರೀಮತಿ ಬರ್ನಡೆಟ್ ದೇವರಾಜ್, ಶ್ರೀಮತಿ ಲಕ್ಷ್ಮಿ, ಶ್ರೀಮತಿ ಸಂಪೂರ್ಣಮ್ ಸ್ಯಾಮ್ಯುಯೆಲ್, ಶ್ರೀಮತಿ ಸುಧಾ ಮೆನನ್ ಮತ್ತು ಶ್ರೀಮತಿ ವಿಮಲಾ. ಸ್ತನ ಕ್ಯಾನ್ಸರ್ ವಿರುದ್ಧ ಹೋರಾಟದಲ್ಲಿನ ಅವರ ಅನುಭವಗಳು ನಮ್ಮ ಸಹಾಯಕ ತಂಡಕ್ಕೆ ಅತ್ಯಮೂಲ್ಯವಾಗಿದೆ.

'ಆಧಾರ'ದ ಉದ್ದೇಶವೇನೆಂದರೆ, ರೋಗಿಗೆ ಮಾನಸಿಕ ಬಲ ನೀಡುವುದು, ಅವರ ಸಮಸ್ಯೆಗಳನ್ನು ಆಲಿಸುವುದು ಮತ್ತು ಕ್ಯಾನ್ಸರ್ ಪತ್ತೆಯಿಂದ ಉಂಟಾಗಬಹುದಾದ ಭಯ, ಒಂಟಿತನವನ್ನು ಎದುರಿಸಲು ನೆರವಾಗುವುದು. ಈ ಕಾರಣದಿಂದ ಸ್ತನ ಕ್ಯಾನ್ಸರ್ ಪೀಡಿತ ಮಹಿಳೆ ಮತ್ತು ಆಕೆಯ ಕುಟುಂಬಕ್ಕೆ ಸಹಾಯ ಹಸ್ತ ಚಾಚಲು ಪ್ರಯತ್ನಿಸುತ್ತಿದ್ದೇವೆ.

## ಆಧಾರ (ಸ್ತನ ಕ್ಯಾನ್ಸರಿನ ಸಹಾಯಕ ತಂಡ)

ಸೇಂಟ್ ಜಾನ್ಸ್ ಆಸ್ಪತ್ರೆಯ ಸಂಶೋಧನಾ ಸಂಸ್ಥೆಯು ಸರ್ಜಿಕಲ್ ಆಂಕಾಲಜಿ ವಿಭಾಗ, ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜ್ ಹಾಸ್ಪಿಟಲ್‌ನ ಸಹಯೋಗದಲ್ಲಿ ಸ್ತನ ಕ್ಯಾನ್ಸರ್ ರೋಗಪತ್ತೆಯಾಗಿ ನಂತರ ಬಚಾವಾಗಿರುವವರು ಮತ್ತವರನ್ನು ಕಾಪಿಟ್ಟುಕೊಳ್ಳುವ ನೆರವಿಗಳಿಗೆ ಸಕ್ರಿಯ ನೆರವಿನ ಕೂಟವೊಂದನ್ನು 2008ರ ಅಕ್ಟೋಬರಿನಲ್ಲಿ ಸಂಸ್ಥಾಪಿಸಿ ತನ್ನ ಕನಸೊಂದನ್ನು ಸಾಕಾರಗೊಳಿಸಿಕೊಂಡಿತು. ಬರಿಯ ದೈಹಿಕ ಕಾಯಿಲೆಯಷ್ಟೇ ಅಲ್ಲದೆ ಕ್ಯಾನ್ಸರ್ ಮಾನಸಿಕವಾಗಿಯೂ ಆಘಾತವುಂಟು ಮಾಡುವಷ್ಟು ಕಂಟಕಕಾರಿ. ಆದುದರಿಂದ ಈ ಆಯಾಮಕ್ಕೆ ತಕ್ಕಂತೆ ಸ್ಪಂದಿಸುವ ಉದ್ದೇಶ ಈ ಕೂಟಕ್ಕಿದೆ. ಕ್ಯಾನ್ಸರಿನಿಂದ ಬಳಲುವ, ಮತ್ತದರೊಡನೆ ಹೋರಾಡುತ್ತಿರುವ ರೋಗಿಗಳಿಗೆ ಜೀವಪರ ಒಲವು ಭಾವನೆ ಮತ್ತು ಧೃಡಚಿತ್ತಗಳನ್ನು ತುಂಬಿದರೆ ಅವರ ಉಳಿಬಾಳಿಗೆ ಒಳಿತಾಗುತ್ತದೆ ಎಂದು ಕ್ಯಾನ್ಸರಿನಿಂದ ರೋಗಮುಕ್ತವಾಗಿ ಹೊರಬಂದವರಲ್ಲಿ ಸಂಶೋಧನಾ ತಂಡಗಳು ಕೈಗೊಂಡ ಅನೇಕ ಅಧ್ಯಯನಗಳು ಮತ್ತು ವರದಿಗಳು ಮನಃ ಮನಃ ರುಜುವಾತು ಮಾಡಿವೆ.

ಆದ್ದರಿಂದ, ಜೀವಪರ ಭಾವನೆಯನ್ನು ಅತ್ಯುನ್ನತ ಮಟ್ಟಕ್ಕೆ ಕೊಂಡೊಯ್ಯುವುದೇ ಆಧಾರ ಕೂಟದ ಹೆಗ್ಗುರಿಯಾಗಿದೆ. ತಜ್ಞರೊಡನೆ ಸಂವಾದವಿರುವ ಈ ಕೂಟದಲ್ಲಿ ವ್ಯಕ್ತಿಗತ ಚಿಕಿತ್ಸೆ, ಗುಂಪು ನೆರವು ಚಿಕಿತ್ಸೆ, ಚರ್ಚಾಕೂಟ ಮುಂತಾದ ಸಹಸ್ಪಂದೀಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಇಲ್ಲಾಗುವ ವಿವೇಚನೆಗಳಿಗೆ ವೇದಿಕೆನ್ನೊದಗಿಸುವ ಉದ್ದೇಶವನ್ನೂ ಆಧಾರ ಸಾಧಿಸುವ ಅಪೇಕ್ಷೆ ಹೊಂದಿದೆ.

ಚಿಕಿತ್ಸೆಯಾಗುವಾಗ ಮತ್ತು ಅನಂತರದ ಕಾಲದಲ್ಲಿ ಕೂಡಾ ಇದೇ ಧನಾತ್ಮಕ ಭಾವನೆಯಿಂದಿರುವಂತೆ ಪ್ರೇರೇಪಿಸಲು ನಮ್ಮ ಕೂಟವು ಕಾರ್ಯವಹಿಸುತ್ತದೆ. ಅಲ್ಲದೆ, ರೋಗಿಗಳ ಪಾಲಕರಿಗೂ ಇದೇ ಭಾವನೆಯನ್ನು ತುಂಬಲು ನಮ್ಮ ಕೂಟ ಪ್ರಯತ್ನಿಸುತ್ತಿದೆ. ತಿಳಿಗುಲಾಬಿ ಬಣ್ಣದ ರಿಬ್ಬನ್ ಮತ್ತು ಜೋಡಿಸಿದ ಕರಗಳು ನಮ್ಮ ಚಿಹ್ನೆಯಾಗಿದೆ. ಜಗತ್ತಿನಾದ್ಯಂತ ಈ ಚಿಹ್ನೆಯನ್ನು ಸ್ತನ ಕ್ಯಾನ್ಸರ್ ರೋಗದ ಗುರುತಿಗಾಗಿ ಬಳಸಲಾಗುತ್ತದೆ. ಜೋಡಿಸಿದ ಕರಗಳು ಸ್ತನ ಕ್ಯಾನ್ಸರ್ ರೋಗಿಗಳಿಗೆ ಆಧಾರ ಪಾಲಕರು ನೀಡುವ ಆಧಾರ ಮತ್ತು ಸಹಾಯವನ್ನು ಬಿಂಬಿಸುತ್ತವೆ.

ಈ ಕಾರಣ ಆಧಾರ ಕೂಟವು ಕ್ಯಾನ್ಸರಿನಿಂದ ಬಳಲುವವರಿಗೆ ಒಳಿತಾಗುವ ಅರಿವುಗಳನ್ನು ಒಡಮೂಡಿಸಲು ತಮ್ಮೆಲ್ಲರ ಸಹಯೋಗವನ್ನು ಅಪೇಕ್ಷಿಸುತ್ತದೆ. ಮೊದಲ ಬಾರಿಗೆ ಕ್ಯಾನ್ಸರ್ ಪತ್ತೆಯಾದ ರೋಗಿಗಳು ಮತ್ತು ರೋಗಮುಕ್ತರ ಸ್ವಾನುಭವ ಹಾಗೂ ತಜ್ಞ ಸಲಹೆ ಇವುಗಳಿಂದ ಕೂಡಿಕೊಂಡ ಅರಿವುಗಳನ್ನು ನಿಮಗೆ ನೀಡುವುದೇ ಈ ಪತ್ರಿಕೆಯ ಉದ್ದೇಶವಾಗಿದೆ.

ಆಧಾರ

ಸೇಂಟ್ ಜಾನ್ಸ್ ನ್ಯಾಷನಲ್ ಅಕಾಡೆಮಿ ಆಫ್ ಹೆಲ್ತ್ ಸೈನ್ಸ್
ಬಿ.ಡಿ.ಎ. ಕಾಂಪ್ಲೆಕ್ಸ್ ಎದುರು, 100 ಅಡಿ ರಸ್ತೆ,
ಕೋರಮಂಗಲ 3ನೇ ಬ್ಲಾಕ್, ಬೆಂಗಳೂರು 560034

ಹೆಲ್ಪ್ ಲೈನ್ : +91-80-22065059
+91-80-25532037
ಈ ಮೇಲ್ ಐಡಿ : brcasupportgroup@gmail.com
annie@sjri.res.in
ವೆಬ್ ಸೈಟ್: www.sjri.res.in